ಬದುಕಿನ ಮಾರ್ಗದರ್ಶಿಯಾಗಿ, ಸಚ್ಚಾರಿತ್ರ್ಯದ ಕುಡಿಯಾಗಿ, ಬಾಳ ಸಂಗಾತಿಯಾಗಿ ನಿಂತವಳು ಲಕ್ಷ್ಮಿ. ಅವರೇ ನಾರಾಯಣರಾಯರ ಸ್ಫೂರ್ತಿ.

ಲಕ್ಷ್ಮೀಬಾಯಿಯ ಒತ್ತಾಯಕ್ಕೆ ಮಣಿದು ಇಂದು ನಾರಾಯಣರಾಯರು ಪುರುಷೋತ್ತಮರಾಯರ ಬಳಿ 'ನೆಂಟಸ್ತನ' ಕುದುರಿಸುವ ಮಹತ್ಕಾರ್ಯಕ್ಕೆ ಹೊರಟಿದ್ದರು. ಇಂದು ಬೆಳಿಗ್ಗೆ ಎದ್ದೊಡನೆ ಲಕ್ಷ್ಮೀಬಾಯಿ ಹೇಳಿದ್ದಳು.

'ನಿನ್ನೆ ರಾತ್ರಿ ಬಿದ್ದ ಕನಸಿನಲ್ಲಿ ಕುಲದೇವಿ ಶಾಂತಾದುರ್ಗೆಯೇ ಬಂದು ಪುರುಷೋತ್ತಮರಾಯರನ್ನು ಹೋಗಿ ಕಂಡರೆ ನಿಮ್ಮ ಮನದಿಚ್ಛೆ ಪೂರ್ಣವಾಗುತ್ತದೆ'ಯೆಂದು ಹೇಳಿದ್ದಾಳೆ.'

ತಮ್ಮ ಪತ್ನಿಯ ಶ್ರದ್ಧೆಯ ಮಾತಿಗೆ ಅವರು ಮರುಮಾತಾಡಲಿಲ್ಲ. ತಮ್ಮ ದುರ್ದೈವಕ್ಕೆ ತಾವೇ ಹಳ ಹಳಿಸಿದರು. ಕೆಂಕರೆ ಪುರುಷೋತ್ತಮರಾಯರೆಂದರೆ ದಾನಧರ್ಮ–ಆದರ್ಶಗಳಿಗೆ ಇನ್ನೊಂದು ಹೆಸರು ಎಂದು ಪ್ರಸಿದ್ಧರಾಗಿದ್ದರು. ಸುತ್ತ ಮುತ್ತಲ ಜನಕ್ಕೆ ಅವರು ಆಪದ್ ಬಾಂಧವರಾಗಿದ್ದರು. ತಮ್ಮ ಮಗನ 'ಬಾಸಿಂಗ ಬಲ' ಕೂಡಿಸಲು ಎಷ್ಟೋ ಮನೆಗಳ ಮೇಲೆ ದಾಳಿ ಮಾಡಿ ನಿಷ್ಫಲರಾಗಿದ್ದರು. ಹೀಗೆ ಓಡಾಡಿದ ಎಲ್ಲ ಮನೆಗಳ ಧನದೌಲತ್ತು ಕಲೆ ಹಾಕಿದರೂ ಪುರುಷೋತ್ತಮರಾಯರ ಶ್ರೀಮಂತಿಕೆಗೆ ಸರಿಸಾಟಿಯಾಗಿ ನಿಲ್ಲುವಂಥವರು ಯಾರೂ ಇರಲಿಲ್ಲ. ಅದೊಂದು ಕಾಲವಾಗಿತ್ತು.

ಈಗ ಅವರಿಗೆ ಹೆಣ್ಣು ಹಡೆಯುವುದೊಂದು ಅಪರಾಧವೆಂಬಂತೆ ಕಾಣುತ್ತಿತ್ತು. ಜಾತಕ ಹಿಡಿದು ಹೋದ ಮನೆಯವರು ಕೆಲವರು ಹಿಂದೆ ಮುಂದೆ ನೋಡದೆ ಏನೇನೊ ಸಬೂಬು ಹೇಳಿ ಬರಿಗೈಯಲ್ಲಿ ಕಳಿಸುತ್ತಿದ್ದರು. ಇನ್ನು ಕೆಲವರು ಏನೂ ಪ್ರತಿಕ್ರಿಯಿಸುತ್ತಿರಲಿಲ್ಲ. ಇದಕ್ಕೆಲ್ಲ ಕಾರಣ ನಾರಾಯಣರಾಯರ ಇಳಿಗಾಲ.

ಒಂದು ಕಾಲದಲ್ಲಿ ನಾರಾಯಣರಾಯರ ಮನೆತನದ ಹೆಣ್ಣು ತರುವುದೆಂದರೆ ಪ್ರತಿಷ್ಠೆಯ ಮಾತಾಗಿತ್ತು. ಈಗ ಈ ದರಿದ್ರಮನೆತನದ ಹೆಣ್ಣು ಬೇಡ, ಎಂಬಂತೆ ನಿಕೃಷ್ಟವಾಗಿ ನೋಡುತ್ತಿದ್ದರು. ಕೆಲವೇ ವರ್ಷಗಳ ಹಿಂದೆ ಪ್ರತಿದಿನ ಅತಿಥಿಗಳಿಗೆ ಎರಡು ಮೂರು ಪಂಕ್ತಿಗಳಲ್ಲಿ ಬಡಿಸುತ್ತಿದ್ದರು. ತಮ್ಮೂರಿಗೆ ಬಂದವರು ಹಸಿದು ಹೋಗಬಾರದು, ಮಧ್ಯಾಹ್ನದ ಹೊತ್ತಿಗೆ ಬಂದವರಿಗೆ ಊಟ ಹಾಕಿಯೇ ಕಳಿಸಿಕೊಡಬೇಕೆಂಬ ಸಂಪ್ರದಾಯ ಅವರು ಬೆಳೆಸಿಕೊಂಡಿದ್ದರು. ಆಗ ನಾರಾಯಣರಾಯರ ಮನೆಯೆಂದರೆ 'ಪೂರ್ಣಯ್ಯನ ಛತ್ರ' ಎಂದು ಜನ ಆಡಿಕೊಳ್ಳುತ್ತಿದ್ದರು. ಅದೆಲ್ಲ ಈಗ ಒಂದು ಇತಿಹಾಸ. ಈಗ ಯಾರಿಗೆ ಹೇಳಿದರೂ ನಂಬದಾದ ಪರಿಸ್ಥಿತಿಯಲ್ಲಿ ಅವರು ಸಿಲುಕಿದ್ದಾರೆ. ಈಗ ಅತಿಥಿಗಳಿಗೆ ಊಟಕ್ಕೆ ಹಾಕುವುದಿರಲಿ ಮನೆ ಮಂದಿಯ ಊಟಕ್ಕೇ ತತ್ವಾರ. ಮನೆಯ ಸುತ್ತಲೂ ಕಟ್ಟಿದ ಕಲ್ಲಿನ ಗೋಡೆಗಳು ಇಂದಿಗೂ ಭದ್ರವಾಗಿವೆ. ಆದರೆ ಅದರ ಮರೆಯಲ್ಲಿದ್ದ ಸಂಸಾರ ಅಭದ್ರವಾಗಿದೆ! ಈ ದುರಂತ ಯಾರಿಗೆ ಗೊತ್ತಿದೆ? ಈ ಮನೆತನದ ಹಿಂದಿನ ವೈಭವದ ಇತಿಹಾಸ ಕೇಳಿ ಬರುವ ಯಾತ್ರಿಕರ ಸಂಖ್ಯೆ ಕಡಿಮೆಯಾಗಲಿಲ್ಲ... ಬಂದವರ ಮುಂದೆ ತಮ್ಮ ಗೋಳು ತೋಡಿಕೊಳ್ಳುವುದೆ? ಮನೆಗೆ ಬಂದವರಿಗೆ ತಮ್ಮ ಪರಿಸ್ಥಿತಿಯ ಅರಿವು ಆಗಬಾರದೆಂದು ಮನೆತನದ ಘನತೆಗೆ ಕುಂದು ತರಬಾರದೆಂದು ಸಾಲ ಸೋಲ ಮಾಡಿ ಆತಿಥ್ಯ ನಡೆಸುವ ನಾರಾಯಣರಾಯರು ವಾರದ ಎಷ್ಟೋ ದಿನ ಉಪವಾಸದಲ್ಲಿ ಕಳೆಯುತ್ತಾರೆ. ಬಂದವರಿಗೆ ಯಾವ ಕೊರತೆಯೂ ಆಗದಂತೆ ನೋಡಿಕೊಳ್ಳುತ್ತಾರೆ. 'ಅತಿಥಿಗಳು ಅಸಂತುಷ್ಟರಾಗಿ ಹೋಗದಂತೆ ಕಾಪಾಡು ದೇವರೇ' ಎಂದು ಶಾಂತಾದುರ್ಗೆಯಲ್ಲಿ ಆರ್ತವಾಗಿ ಬೇಡಿಕೊಳ್ಳುತ್ತಾರೆ.

ಪುರುಷೋತ್ತಮರಾಯರು ಸರ್ವಸಾಧಾರಣ ಧನಿಕವರ್ಗಕ್ಕೆ ಸೇರಿದವರಲ್ಲ. ಅವರಲ್ಲಿ ಸಂಪತ್ತಿಗಿಂತ ಮಾನವತೆ ಅಧಿಕವಾಗಿತ್ತು. ಅವರಲ್ಲಿರುವ ದುಡ್ಡು ಆತ್ಮಪ್ರೌಢಿಮೆಯ ಸಾಧನವಾಗಿರಲಿಲ್ಲ, ಲೋಕ ಕಲ್ಯಾಣದ ಮಾಧ್ಯಮವಾಗಿತ್ತು. ಇತರರ ಕಷ್ಟ ನಿವಾರಣೆಯಲ್ಲಿ ತಮ್ಮ ಸುಖ ಕಾಣುತ್ತಿದ್ದ